ದಿಃ 17.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಕೆ.ಎಂ.ಪಿ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ನಿ.ಪಿ.6 ನಕ್ಷೆಯನ್ನು ನಾನೇ ತಯಾರಿಸಿರುತ್ತೇನೆ ಎಂದು ಸಾಕ್ಷಿ ನಿ.ಪಿ.6 ರಲ್ಲಿ ಇರುವ ಸಹಿಯನ್ನು ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಎಂ.ಎಂ.ಆರ್ ವಕೀಲರಿಂದ ಪ್ರತಿವಾದಿಯರ ಪರವಾಗಿ

3. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 07.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ಪಾಟೀ ಸವಾಲು ಶ್ರೀ ಎಂ.ಎಂ.ಆರ್ ವಕೀಲರಿಂದ ಪ್ರತಿವಾದಿಯರ ಪರವಾಗಿ

4. ನಾನು ಚಿಕ್ಕಮಗಳೂರಿನ ಹೊಸಮನೆಯಲ್ಲಿ ಖಾಸಗಿ ಸರ್ವೆಯರ್ ಕಚೇರಿಯನ್ನು ಹೊಂದಿದ್ದೇನೆ. ನಾನು 41 ವರ್ಷಗಳಿಂದ ಖಾಸಗಿ ಸರ್ವೆಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಖಾಸಗಿ ಸರ್ವೆಯರ್ ಆಗಿ ಲೈಸೆನ್ಸ್ ಹೊಂದಿದ್ದೇನೆ ಎಂದು ತೋರಿಸಲು ಲೈಸೆನ್ಸ್ ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನಾನು ಲೈಸೆನ್ಸ್ ಹೊಂದದ ಕಾರಣ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಟಾಟಾ ಕಾಫಿ ಕಂಪನಿಯ ವಕೀಲರಾದ ಕಾರ್ನಾಡ್ ರವರು 2016-17 ರಲ್ಲಿ ನನಗೆ ಅಳತೆಯ ಬಗ್ಗೆ ವಿಚಾರಿಸಿದ್ದರು. ಅಳತೆ ಮಾಡಿಕೊಡುವಂತೆ ನನಗೆ ವಕೀಲರು ಇ-ಮೇಲ್ ಕಳುಹಿಸಿದ್ದರು. ಸದರಿ ಇ-ಮೇಲ್ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಆ ರೀತಿಯ ಯಾವುದೇ ಇ-ಮೇಲ್ ಅನ್ನು ವಾದಿ ಕಂಪನಿಯವರು ನನಗೆ ಕಳುಹಿಸಿಲ್ಲ, ಆ ಕಾರಣವೇ ನಾನು ಸದರಿ ದಾಖಲೆಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

5. ವಾದಿ ಕಂಪನಿಯವರು ನನಗೆ ಇ-ಮೇಲ್ ಕಳುಹಿಸಿದ 10 ರಿಂದ 15 ದಿನಗಳಲ್ಲಿ ನಾನು ಅಳತೆಗೆ ಹೋಗಿದ್ದೆ, ಯಾವ ತಿಂಗಳು ಇ-ಮೇಲ್ ಕಳುಹಿಸಿದ್ದರು ಎಂದು ನೆನಪಿಲ್ಲ. ನಾನು ಚಿಕ್ಕಮಗಳೂರಿನಿಂದ ವಾದಿಯವರ ಎಸ್ಟೇಟಿಗೆ ನನ್ನ ವಾಹನದಲ್ಲಿ ಹೋಗಿದ್ದೆ. ಅಳತೆ ಮಾಡಲು ಹೋಗುವ ಮೊದಲು ನಾನು ಸದರಿ ಎಸ್ಟೇಟಿಗೆ ಯಾವತ್ತೂ ಹೋಗಿಲ್ಲ. ಎಸ್ಟೇಟಿಗೆ ಯಾವ ರೀತಿ ಹೋಗಬೇಕು ಎಂದು ವಿಳಾಸ ತಿಳಿಸಿದ್ದರಿಂದ ಹೋಗಿದ್ದೆ. ನಾನು ಖಾಸಗಿ ಸರ್ವೆಯರ್ ಆದ ಕಾರಣ ಅಳತೆಗೆ ಬರುತ್ತೇನೆ ಎಂದು ಯಾರಿಗೂ ನೋಟೀಸು ಕಳುಹಿಸಿರಲಿಲ್ಲ. ನಾನು ಸ್ಥಳಕ್ಕೆ ಹೋದಾಗ ಮ್ಯಾನೇಜರ್ ಕಚೇರಿಯಲ್ಲಿ ಇದ್ದರು, ನನ್ನ ಜೊತೆ ಸಿಬ್ಬಂಧಿಯನ್ನು ಕಳುಹಿಸಿಕೊಟ್ಟಿದ್ದರು. ನಾನು ಅಳತೆ ಮಾಡುವಾಗ ಕರಾಬನ್ನು ಗುರುತಿಸಿರಲಿಲ್ಲ, ಒಟ್ಟು ಸರ್ವೆಯನ್ನು ಮಾಡಿದ್ದೇನೆ. ನಾನು ಜಿ.ಪಿ.ಎಸ್ ಮತ್ತು ಚೈನ್ ಮೂಲಕ ಅಳತೆಯನ್ನು

ಮಾಡಿದ್ದೆ. ನಾನು ಅಳತೆ ಕಾರ್ಯದ ವಿಡಿಯೋಗ್ರಾಫಿ ಮಾಡಲಿಲ್ಲ. ನಾನು ಮಾಡಿದ ಸರ್ವೆಗೆ ಸಾಕ್ಷಿದಾರರ ಸಹಿಗಳನ್ನು ಪಡೆಯಲಿಲ್ಲ. ನಾನು ಸರ್ವೆ ಮಾಡಿದ ಜಮೀನು 24 ರಿಂದ 25 ಎಕರೆ ಇತ್ತು, ನಾನು 21 ಚಿಲ್ಲರೆ ಜಮೀನಿನ ಸರ್ವೆ ಮಾಡಿದ್ದೆ, outer boundary 3 ಎಕರೆ ಇತ್ತು. outer boundary ಯ 3 ಎಕರೆ ಜಮೀನು ಯಾರು ಒತ್ತುವರಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. 21 ಎಕರೆ ಜಮೀನಿನ ದಕ್ಷಿಣ – ಪಶ್ಚಿಮ ದಿಕ್ಕಿಗೆ ಆ 3 ಎಕರೆ ಜಮೀನು ಬರುತ್ತಿತ್ತು. ನಾನು ಸ್ಥಳಕ್ಕೆ ಹೋಗಿ ಸರ್ವೆ ಮಾಡಿ ವರದಿಯನ್ನು ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ, ನಾನು ಕಚೇರಿಯಲ್ಲಿಯೇ ಕುಳಿತು ಸದರಿ ವರದಿಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನಿಜವಾಗಿಯು ಸ್ಥಳಕ್ಕೆ ಹೋಗಿದ್ದರೆ ಎಷ್ಟು ಜಮೀನನ್ನು ಅಳತೆ ಮಾಡಿದ್ದೆ ಮತ್ತು ಎಷ್ಟು outer boundary ಇತ್ತು ಎಂದು ನಿಖರವಾಗಿ ಹೇಳುತ್ತಿದ್ದೆ, ನಾನು ಸ್ಥಳಕ್ಕೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ.

6. ಈ ದಿನ ನನ್ನನ್ನು ವಾದಿ ಕಂಪನಿಯ ವ್ಯವಸ್ಥಾಪಕರು ನ್ಯಾಯಾಲಯಕ್ಕೆ ಕರೆ ತಂದಿದ್ದಾರೆ ಎಂದರೆ ಸರಿ. ಆ ಕಾರಣದಿಂದ ನಾನು ವಾದಿ ಕಂಪನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ವೆ ಮಾಡಿ ನಕ್ಷೆಯನ್ನು ನೀಡಿದ್ದೇನೆ ಎಂದು ಹೇಳುವ ದಾಖಲೆಗೂ ಮತ್ತು ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ</u>

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ